ಕರ್ನಾಟಕ ಸರ್ಕಾರ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 012
ದೂರವಾಣಿ: 080-2346 1575, 2346 2758, 2346 2599, 2356 8201, 2356 8202 ಫ್ಯಾಕ್ಸ್: 080-2346 1576

ನಂ. ಇಡಿ/ಕೆಇಎ/ಲೀಗಲ್ ಸೆಲ್/ಸಿಆರ್-13/2013-14 ದಿನಾಂಕ: 02-07-2013

ಸ್ನಾತಕೋತ್ತರ ಎಂಬಿಎ ಕೋರ್ಸ್‌ಗೆ ಪ್ರವೇಶಾತಿ - 2013

ಸರ್ಕಾರದ ಪತ್ರ ಇಡಿ 177 ಟಿಇಸಿ 2012 ದಿನಾಂಕ 25-03-2013ರ ಮೇರೆಗೆ ಕರ್ನಾಟಕ ಸರ್ಕಾರದಿಂದ 2013-14ನೇ ಸಾಲಿಗಾಗಿ ಪ್ರಕಟಿಸಲಾಗುವ ವಿಶ್ವವಿದ್ಯಾನಿಲಯಗಳಿಂದ ಅಂಗೀಕೃತ ಸಂಸ್ಥೆಗಳಲ್ಲಿ ಮೊದಲನೇ ವರ್ಷದ ಎಂಬಿಎ ಕೋರ್ಸ್ ಪ್ರವೇಶಾತಿಗಾಗಿ ಕರ್ನಾಟಕ ಹಾಗೂ ಕರ್ನಾಟಕೇತರ ಅರ್ಹ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಗಮನಿಸಿ:

- 2013ರ ಪ್ರವೇಶಾತಿಗಳಿಗಾಗಿ ಎಂಬಿಎ ಕೋರ್ಸಿಗೆ ಪ್ರವೇಶಾತಿಯು ಸಿಎಂಎಟಿ(CMAT)ಯಲ್ಲಿ ಪಡೆದ ಅಂಕಗಳ ಮೇಲೆ ಮಾತ್ರ ಆಧಾರಪಟ್ಟಿರುತ್ತದೆ. ಎಂಬಿಎ ಕೋರ್ಸ್‌ನ ಪ್ರವೇಶಾತಿಗಾಗಿ ಪಿಜಿಸಿಇಟಿಯನ್ನು ನಡೆಸಲಾಗುವುದಿಲ್ಲ.
- ಆಡಳಿತ ವರ್ಗದಿಂದ ಹಿಂತಿರುಗಿಸಲ್ಪಟ್ಟ ಸೀಟುಗಳು ಯಾವುದಾದರೂ ಇದ್ದಲ್ಲಿ, ಅವುಗಳನ್ನು ಮಾತ್ರ ಕರ್ನಾಟಕೇತರ ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳಲು ಅರ್ಹರಾಗಿರುತ್ತಾರೆ.

ಶೈಕ್ಷಣಿಕ ಅರ್ಹತೆ: ಮೇಲ್ಕಂಡ ಕೋರ್ಸಿಗೆ ಶೈಕ್ಷಣಿಕ ಅರ್ಹತೆಯ ವಿವರಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ವೆಬ್‌ಸೈಟ್ **http://kea.kar.nic.in**ನಲ್ಲಿ ಪ್ರಕಟಿಸಲಾಗಿದೆ. ಯಾವುದೇ ಕೋರ್ಸಿಗೆ ಅರ್ಜಿ ಸಲ್ಲಿಸುವ ಮುನ್ನ ಅಭ್ಯರ್ಥಿಗಳು ಅರ್ಹತಾ ಮಾನದಂಡವನ್ನು ಪರಿಶೀಲಿಸಲು ಕೋರಲಾಗಿದೆ.

ಅರ್ಜಿ ಸಲ್ಲಿಸುವುದು ಹೇಗೆ?

ಕ್ರಮ 1: **ಸಾಮಾನ್ಯ ವರ್ಗ ಮತ್ತು ಓಬಿಸಿ ಅಭ್ಯರ್ಥಿಗಳು ರೂ. 600/- ಮೊತ್ತವನ್ನು (ಎಸ್‌ಸಿ/ಎಸ್‌ಟಿ ವರ್ಗ-1ರವರಿಗೆ ರೂ. 300/-)** ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದ ಎನ್‌ಇಎಫ್‌ಟಿ(NEFT) ಮೂಲಕ **ಖಾತೆ ಸಂ. 878333780**ಗೆ ಪಾವತಿಯಾಗುವಂತೆ ಎನ್‌ಇಎಫ್‌ಟಿ(NEFT)/ ಐಎಫ್‌ಎಸ್‌ಸಿ(IFSC) ಕೋಡ್ **IDIB000M010** ನೊಂದಿಗೆ **ದಿ ಇಂಡಿಯನ್ ಬ್ಯಾಂಕ್, ಮಲ್ಲೇಶ್ವರಂ ಶಾಖೆ, ಬೆಂಗಳೂರು** ಇಲ್ಲಿಗೆ ಪಾವತಿಸತಕ್ಕದ್ದು ಹಾಗೂ ಆಡಳಿತಾಧಿಕಾರಿ, ಕೆಇಎ ಅವರಿಗೆ **keauthority-ka@nic.in** ಗೆ ಇ-ಮೇಲ್ ಕಳುಹಿಸತಕ್ಕದ್ದು. ಇತರ ಯಾವುದೇ ವಿಧದ ಪಾವತಿಯನ್ನು ಅಂಗೀಕರಿಸಲಾಗುವುದಿಲ್ಲ.

ಕ್ರಮ 2: ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕವನ್ನು NEFT ಮೂಲಕ ಪಾವತಿಸಿರುವುದಕ್ಕೆ UTR (Unit Transaction Reference/ ವಿಶಿಷ್ಟ ವ್ಯವಹಾರ ಉಲ್ಲೇಖ) ಸಂಖ್ಯೆಯನ್ನು ಪಾವತಿಸಿದ ಬ್ಯಾಂಕಿನಿಂದ ನೀಡಲಾಗುತ್ತದೆ.

ಕ್ರಮ 3: ಶುಲ್ಕ ಪಾವತಿಯಾಗಿರುವುದರ ಅಂತಹ ಎಲ್ಲಾ ವಿವರಗಳನ್ನು ವೆಬ್‌ಸೈಟ್ **http://kea.kar.nic.in** ನಲ್ಲಿ ಆನ್‌ಲೈನ್ ಮುಖೇನ ದಾಖಲಿಸಿ.

ಕ್ರಮ 4: ಪಾವತಿಯ ವಿವರಗಳನ್ನು ತುಂಬಿಸಿದ ನಂತರ ಮಾತ್ರ ಅಭ್ಯರ್ಥಿಯು ಅರ್ಜಿಯ ವಿವರಗಳನ್ನು ವೆಬ್‌ಸೈಟ್ **http://kea.kar.nic.in** ನಲ್ಲಿ ಆನ್‌ಲೈನ್ ಮೂಲಕ ಭರ್ತಿ ಮಾಡಲು ಸಾಧ್ಯ. ವಿವರವಾದ ನಿರ್ದೇಶನಗಳನ್ನು/ಮಾಹಿತಿಗಳನ್ನು ವೆಬ್‌ಸೈಟ್ **http://kea.kar.nic.in** ನಲ್ಲಿ ನೀಡಲಾಗಿದೆ.

ಕ್ರಮ 5: ಅದೇ ಯುಆರ್‌ಎಲ್‌ನ ಮೂಲಕವೇ ಅರ್ಜಿಯ ವಿವರಗಳನ್ನು ವೆಬ್‌ಸೈಟ್ **http://kea.kar.nic.in** ನಲ್ಲಿ ದಾಖಲಿಸಿ.

ಕ್ರಮ 6: ಅರ್ಜಿಯೊಂದಿಗೆ ಬಣ್ಣದ ಭಾವಚಿತ್ರ ಹಾಗೂ ಋಜುವನ್ನು ಜೆಪಿಇಜಿ ನಮೂನೆಯಲ್ಲಿ (scanned colour photograph and signature in JPEG format) ಅಪ್‌ಲೋಡ್ ಮಾಡಿ.

ದಿನಾಂಕಗಳ ವೇಳಾಪಟ್ಟಿ	
ಆನ್‌ಲೈನ್‌ನಲ್ಲಿ ಅರ್ಜಿ ತುಂಬಲು ಪ್ರಾರಂಭಿಸುವುದು	05-07-2013
ಎನ್‌ಇಎಫ್‌ಟಿ ಮೂಲಕ ಬ್ಯಾಂಕ್‌ನಲ್ಲಿ ಶುಲ್ಕ ಪಾವತಿಸಲು ಕಡೆಯ ದಿನಾಂಕ	15-07-2013
ಆನ್‌ಲೈನ್ ಮೂಲಕ ಅರ್ಜಿ ದಾಖಲಿಸಲು ಕಡೆಯ ದಿನಾಂಕ	17-07-2013
ಸಿಎಂಎಟಿ ಅಂಕಗಳ ಮೇರೆಗೆ **http://kea.kar.nic.in** ನಲ್ಲಿ ಅರ್ಹತಾ ಪಟ್ಟಿಯನ್ನು ಪ್ರದರ್ಶಿಸುವ ದಿನಾಂಕ	18-07-2013
ಆಪ್ಷನ್ ಎಂಟ್ರಿಯನ್ನು ಸಲ್ಲಿಸಲು ದಾಖಲೆಗಳ ಪರಿಶೀಲನೆ ಮತ್ತು ಪಾಸ್‌ವರ್ಡ್ ಸಂಗ್ರಹಣೆ (ಅರ್ಹತಾ ಪಟ್ಟಿಯೊಂದಿಗೆ ವಿವರವಾದ ವೇಳಾಪಟ್ಟಿಯನ್ನು ನೀಡಲಾಗುವುದು)	19-07-2013 ರಿಂದ 22-07-2013

ಗಮನಿಸಿ:

- ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸ್ವೀಕೃತಿಯಡಿಯಲ್ಲಿ ಅಭ್ಯರ್ಥಿಯ ಮೂಲ ದಾಖಲೆಯೊಂದನ್ನು ತನ್ನ ಬಳಿ ಉಳಿಸಿಕೊಳ್ಳುವುದು ಹಾಗೂ ಅಭ್ಯರ್ಥಿಯು ಪ್ರವೇಶಾತಿಯನ್ನು ಪಡೆದ ನಂತರ ಮಾತ್ರವೇ ಅದನ್ನು ಹಿಂತಿರುಗಿಸುವುದು.
- ಬ್ಯಾಂಕ್‌ನಿಂದ ಪಾವತಿ ವಿವರಗಳನ್ನು ಪಡೆದ ನಂತರ, ಪ್ರವೇಶಾತಿ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅಭ್ಯರ್ಥಿಗೆ ಅವಕಾಶ ನೀಡಲಾಗುವುದು.
- ಎಂಬಿಎ ಪ್ರವೇಶಾತಿಗಾಗಿ ಆನ್‌ಲೈನ್‌ನಲ್ಲಿ ಅಭ್ಯರ್ಥಿಗಳಿಂದ ದಾಖಲಿಸಿದ ಮಾಹಿತಿ/ ವಿವರಗಳನ್ನು "ಅಂತಿಮ" ಎಂದು ಪರಿಗಣಿಸಲಾಗುವುದು ಮತ್ತು ನಂತರದ ಪ್ರಕ್ರಿಯೆಗೆ ಆಧಾರವಾಗಿರುವುದು. ಅಭ್ಯರ್ಥಿಗಳಿಂದ ದಾಖಲಿಸಿದ ಯಾವುದೇ ಮಾಹಿತಿಯಲ್ಲಿ ಬದಲಾವಣೆಗೆ ಆಸ್ಪದ ನೀಡಲಾಗುವುದಿಲ್ಲ.
- ದಾಖಲೆ ಪರಿಶೀಲನೆಯ ದಿನಾಂಕದಂದು ಅಭ್ಯರ್ಥಿಗಳ ಫಲಿತಾಂಶಗಳನ್ನು ಇನ್ನೂ ಪ್ರಕಟಿಸದಿದ್ದಲ್ಲಿ ಹಾಗೂ ಅವರ ಪಾಸ್‌ವರ್ಡ್‌ನ ಸಂಗ್ರಹಣೆಯನ್ನು ಮಾಡಬೇಕಾಗಿದ್ದಲ್ಲಿ, ಅಂತಹ ಅಭ್ಯರ್ಥಿಗಳು ಪ್ರವೇಶಾತಿ ಪಡೆಯಲು ಈ ಮುಂದಿನ ಷರತ್ತಿನ ಮೇರೆಗೆ ಅವಕಾಶವುಂಟು - ಅಂದರೆ ಅವರ ಹಕ್ಕನ್ನು ಸಮರ್ಥಿಸಿಕೊಳ್ಳಲು ಅರ್ಹತಾ ಪರೀಕ್ಷೆಯ ಅಂಕಗಳನ್ನು ಅರ್ಹತಾ ಪರೀಕ್ಷೆಯ ಫಲಿತಾಂಶ ಪ್ರಕಟವಾದ ಕೂಡಲೇ ಸಲ್ಲಿಸತಕ್ಕದ್ದು. ಒಂದು ವೇಳೆ ಅವರು ಎಂಬಿಎಗೆ ಅರ್ಹತೆ ಪಡೆಯದಿದ್ದಲ್ಲಿ, ಅವರ ಪ್ರವೇಶಾತಿಯು ತಾನೇ ತಾನಾಗಿ ರದ್ದುಗೊಳ್ಳುವುದು.

ವಿವಿಧ ಅರ್ಹತಾ ನಿಬಂಧನೆಗಳಿಗೆ ಸಂಬಂಧಿಸಿದ ಹೆಚ್ಚಿನ ವಿವರಗಳಿಗಾಗಿ
ಕೆಇಎ ವೆಬ್‌ಸೈಟ್ **http://kea.kar.nic.in** ಗೆ ಭೇಟಿ ನೀಡಿ.

ಸಹಿ/-
ಚಕ್ರವರ್ತಿ ಮೋಹನ್, ಭಾಆಸೇ,
ಕಾರ್ಯನಿರ್ವಾಹಕ ನಿರ್ದೇಶಕರು